# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 688 |
| ಮಾನ್ಯ ಸದಸ್ಯರ ಹೆಸರು | : | **ಶ್ರೀ ಎಸ್.ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ)** |
| ಉತ್ತರಿಸಬೇಕಾದ ದಿನಾಂಕ | : | 13-12-2024 |
| ಉತ್ತರಿಸುವ ಸಚಿವರು | : | ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿರುವ ಹಿಂದುಳಿದ ಜಾತಿಗಳ ಯಾವುವು; ಅವುಗಳನ್ನು ಯಾವ ರೀತಿ ವರ್ಗೀಕರಿಸಲಾಗಿದೆ; ನ್ಯಾಯಮೂರ್ತಿ ಒ.ಚಿನ್ನಪ್ಪ ರೆಡ್ಡಿ ಆಯೋಗದ ಶಿಫಾರಸ್ಸುಗಳೇನು; ಉನ್ನತ ಶಿಕ್ಷಣ ಮತ್ತು ಸಿಬ್ಬಂದಿ ನೇಮಕಾತಿ ವಿಷಯದಲ್ಲಿ ಇದನ್ನು ಸರ್ಕಾರ ಯಾವ ದಿನಾಂಕದಿಂದ ಜಾರಿಗೆ ತಂದಿದೆ; (ವಿವರವಾದ ಮಾಹಿತಿ ನೀಡುವುದು)</td><td>ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ: 30.03.2002 ರ ಆದೇಶದಲ್ಲಿ ರಾಜ್ಯದಲ್ಲಿನ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಮೀಸಲಾತಿಯನ್ನು ಕಲ್ಪಿಸುವ ಉದ್ದೇಶದಿಂದ ಪ್ರವರ್ಗವಾರು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.
<table>
<tr><th>ಕ್ರ ಸಂ.</th><th>ಪ್ರವರ್ಗ</th><th>ಒಟ್ಟು ಜಾತಿಗಳ ಸಂಖ್ಯೆ</th></tr>
<tr><td>1</td><td>ಪ್ರವರ್ಗ -I</td><td>389</td></tr>
<tr><td>2</td><td>ಪ್ರವರ್ಗ -II (ಎ)</td><td>393</td></tr>
<tr><td>3</td><td>ಪ್ರವರ್ಗ -II (ಬಿ)</td><td>01</td></tr>
<tr><td>4</td><td>ಪ್ರವರ್ಗ -III (ಎ)</td><td>50</td></tr>
<tr><td>5</td><td>ಪ್ರವರ್ಗ -III (ಬಿ)</td><td>48</td></tr>
<tr><td></td><td>ಒಟ್ಟು</td><td>881</td></tr>
</table>
ಜಸ್ಟೀಸ್ ಓ ಚಿನ್ನಪ್ಪ ರೆಡ್ಡಿ ನೇತೃತ್ವ 3ನೇ ಹಿಂದುಳಿದ ವರ್ಗಗಳ ಆಯೋಗವು ತನ್ನ ಶಿಫಾರಸ್ಸಿನಲ್ಲಿ ಭಾರತ ಸಂವಿಧಾನ ಅನುಚ್ಛೇದ 15(4) ಹಾಗೂ ಅನುಚ್ಛೇಧ 16(4) ರ ಉದ್ದೇಶಕ್ಕಾಗಿ ಜಾತಿ/ ಸಮುದಾಯ/ಬುಡಕಟ್ಟು/ಧಾರ್ಮಿಕ/ವೃತ್ತಿ ಸಮೂಹಗಳನ್ನು ಹಾಗೂ ಉಪ-ಸಮೂಹಗಳನ್ನು ಸಮುದಾಯದ ತುಲನಾತ್ಮಕ ಹಿಂದುಳಿದಿರುವಿಕೆ ಹಾಗೂ ಸಮುದಾಯದ ಸಂಖ್ಯೆ ಆಧಾರದ ಮೇಲೆ 03 ವರ್ಗಗಳಾಗಿ ವಿಂಗಡಿಸಲಾಗಿದೆ. ವರ್ಗ-I ಮತ್ತು ವರ್ಗ-II ಗಳು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳೆಂದು ವರ್ಗ-III ವೃತ್ತಿ ಸಮೂಹಗಳನ್ನು ಒಳಗೊಂಡ ವರ್ಗವೆಂದು ಗುರುತಿಸಲಾಗಿರುತ್ತವೆ. ವರ್ಗ-I ಕ್ಕೆ ಶೇಕಡ 5ರ ಮೀಸಲಾತಿ, ವರ್ಗ- IIಕ್ಕೆ ಶೇಕಡ 28ರ ಮೀಸಲಾತಿ ಹಾಗೂ ವರ್ಗ- III ಶೇಕಡ 5 ರ ಮೀಸಲಾತಿ ನೀಡಬಹುದಾಗಿದೆ ಎಂದು ಶಿಫಾರಸ್ಸು ಮಾಡಿರುತ್ತದೆ.</td></tr>
</table>

<table>
<tr><td></td><td></td><td>ಸರ್ಕಾರವು ಜಸ್ಟೀಸ್ ಓ ಚಿನ್ನಪ್ಪ ರೆಡ್ಡಿ ನೇತೃತ್ವ 3ನೇ ಹಿಂದುಳಿದ ವರ್ಗಗಳ ಆಯೋಗದ ವರದಿಯನ್ನು ಅಂಗೀಕರಿಸಿ ಸರ್ಕಾರದ ಆದೇಶ ಸಂಖ್ಯೆ: SWD 150 BCA 94 ದಿನಾಂಕ:17.09.1994 ರಂದು ಜಾರಿಗೆ ತಂದಿದ್ದು, ಅದರಲ್ಲಿ ಪ್ರವರ್ಗವಾರು ಮೀಸಲಾತಿ ವಿವರ ಈ ಕೆಳಕಂಡಂತಿರುತ್ತದೆ.<br><br>
<table>
<tr><th>ಪ್ರವರ್ಗ</th><th>ಮೀಸಲಾತಿ ಪ್ರಮಾಣ (ಶೇಕಡವಾರು)</th></tr>
<tr><td>ಪ್ರವರ್ಗ -I</td><td>4 %</td></tr>
<tr><td>ಪ್ರವರ್ಗ -II (ಎ)</td><td>15 %</td></tr>
<tr><td>ಪ್ರವರ್ಗ -II (ಬಿ)</td><td>4 %</td></tr>
<tr><td>ಪ್ರವರ್ಗ -III (ಎ)</td><td>4 %</td></tr>
<tr><td>ಪ್ರವರ್ಗ -III (ಬಿ)</td><td>5 %</td></tr>
<tr><td>ಒಟ್ಟು</td><td>32%</td></tr>
</table>
</td></tr>
<tr><td>ಆ)</td><td>ಕುಲಶಾಸ್ತ್ರ ಅಧ್ಯಯನ ಎಂದರೇನು ಒಕ್ಕಲಿಗ ಸಮುದಾಯದ ಎಷ್ಟು ಜಾತಿಗಳು ಕುಲಶಾಸ್ತ್ರ ಅಧ್ಯಯನ ವರದಿ ಆಧರಿಸಿ ಕೇಂದ್ರ ಸರ್ಕಾರಕ್ಕೆ ಒಬಿಸಿ ಮೀಸಲಾತಿಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ; (ವಿವರವಾದ ಮಾಹಿತಿ ನೀಡುವುದು)</td><td>ಕುಲಶಾಸ್ತ್ರೀಯ ಅಧ್ಯಯನವು ಸಾಮಾಜಿಕ ಮಾನವಶಾಸ್ತ್ರ ಅಧ್ಯಯನ ವಿಧಾನಗಳಲ್ಲಿ ಒಂದಾಗಿದ್ದು, ಯಾವುದೇ ಒಂದು ಕುಲ, ಜಾತಿ, ಸಮುದಾಯ ಅಥವಾ ಜನಾಂಗದ ಜೀವನ ವಿಧಾನದ ಬಗ್ಗೆ ಇರುವ ಕುಲಮೂಲ ಕಥನ, ಪುರಾಣ, ಐತಿಹ್ಯ, ಅಸ್ಮಿತೆ, ಜನಪದಕಥೆ, ಆಚರಣೆ-ಸಂಪ್ರದಾಯ, ನಂಬಿಕೆ, ವಿಧಿ-ನಿಷೇಧ, ಧಾರ್ಮಿಕ ಪದ್ಧತಿ, ಆಹಾರ, ಉಡುಗೆ, ತೊಡುಗೆ, ವೃತ್ತಿ, ದೈವಾರಾಧನೆ, ವೈವಾಹಿಕ- ಕೌಟುಂಬಿಕ ಸಂಬಂಧ, ಬದುಕಿನ ನೀತಿ-ನಿಯಮ, ಸಾಮಾಜಿಕ-ಸಾಮುದಾಯಿಕ ನಿಯಂತ್ರಣ ವಿಧಾನ, ನ್ಯಾಯ ಪಂಚಾಯಿತಿ, ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿಯ ಸಮಗ್ರ ಅಧ್ಯಯನವಾಗಿದೆ. ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯವತಿಯಿಂದ ಮೈಸೂರು ವಿದ್ಯಾಲಯದ ಸಹಯೋಗದೊಂದಿಗೆ ಪ್ರವರ್ಗ- 3(ಎ) ರಲ್ಲಿ ಬರುವ ಕುಂಚಿಟಿಗ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನವನ್ನು ಕೈಗೊಂಡು ವರದಿಯನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.</td></tr>
<tr><td>ಇ)</td><td>ಕುಂಚಿಟಿಗ ಸಮುದಾಯದವರು ಇಲ್ಲಿಯವರೆಗೂ ಒಬಿಸಿ ಪಟ್ಟಿಗೆ ಸೇರದಿರಲು ಕಾರಣಗಳೇನು; ಯಾವ ಕಾಲಮಿತಿಯಲ್ಲಿ ಸೇರಿಸಲಾಗುವುದು.</td><td>ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಸಮುದಾಯವಾಗಿ ಗುರುತಿಸಲ್ಪಟ್ಟು ರಾಜ್ಯದ ಹಿಂದುಳಿದ ವರ್ಗಗಳ ಜಾತಿ ಪಟ್ಟಿಯಲ್ಲಿ ಸೇರ್ಪಡೆಯಾಗಿರುವ ಕುಂಚಿಟಿಗ ಜಾತಿಯನ್ನು ಕೇಂದ್ರದ ಇತರೆ ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಗೆ ಸೇರ್ಪಡೆ ಮಾಡುವಂತೆ ದಿನಾಂಕ:30.10.2023ರಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.</td></tr>
</table>

**ಸಂಖ್ಯೆ:ಹಿಂವಕ 349 ಬಿಸಿಎ 2024**

(ಶಿವರಾಜ ಎಸ್. ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು